**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.69/2024**

**ಪಿಡಬ್ಲ್ಯೂ- 01(ಸಿಡಬ್ಲ್ಯೂ-01)**

ಸಾಕ್ಷಿದಾರರ ಹೆಸರು : ಸಾಬಪ್ಪ ಇಟಗಿ
ತಂದೆಯ ಹೆಸರು : ಸಿದ್ದಪ್ಪ
ವಯಸ್ಸು : 33 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ಇವಣಗಿ, ಬಸವನ ಬಾಗೇವಾಡಿ

**ಸಾಕ್ಷಿಗೆ ಇಂದು ದಿನಾಂಕ :- 12/08/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಚಾಸಾ- 4, 5, 7, 12, & 13 ರವರು ನನಗೆ ಪರಿಚಯ. ಚಾಸಾ-6 ಮತ್ತು ಚಾಸಾ-9 ರವರು ನನ್ನ ಸಹೋದರರು. ಚಾಸಾ-8 ರವರು ನನ್ನ ತಾಯಿ. ಚಾಸಾ-10 ನನ್ನ ಅಜ್ಜ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಪರಿಚಯ.

2. ನಾನು ಇವಣಗಿ ಗ್ರಾಮದ ಹೊಲದಲ್ಲಿ ಮನೆ ಮಾಡಿಕೊಂಡು ನನ್ನ ತಾಯಿ ಮತ್ತು ಸಹೋದರರೊಂದಿಗೆ ವಾಸವಿದ್ದೇನೆ. ಸುಮಾರು 16 ವರ್ಷಗಳ ಹಿಂದೆ ನಾನು ಮತ್ತು 1 ನೇ ಆರೋಪಿಯ ಜೊತೆ ಊರಿನ ಇನ್ನು ಕೆಲವು ಜನರ ಜೊತೆ ಸೇರಿಕೊಂಡು ಮೋಟರ್ ಸಲುವಾಗಿ ಟಿ.ಸಿ.ಹಾಕಿಸಿದ್ದೇವು. ಅದರ ಖರ್ಚಿನ ಸಲುವಾಗಿ ಎಲ್ಲರೂ ಹಣ ಸೇರಿಸಿ 1 ನೇ ಆರೋಪಿಯ ಕೈಗೆ ಕೊಟ್ಟಿದ್ದೇವು. ಸದರಿ ಟಿ.ಸಿ.ಯು ಓವರ್ ಲೋಡ್ ಆಗಿದ್ದರಿಂದ ನಾನು 1 ನೇ ಆರೋಪಿಗೆ ಹೇಗಿದ್ದರೂ ನಿನ್ನ ಹತ್ತಿರ ರೊಕ್ಕ ಇದೆ ಇನ್ನೊಂದು ಹೊಸ ಟಿ.ಸಿ. ತೆಗೆದುಕೊಳ್ಳೋಣ ಎಂದು ಹೇಳಿದ್ದೆ. ಅದಕ್ಕೆ 1 ನೇ ಆರೋಪಿಯು ಯಾರು ಕೇಳುವುದಿಲ್ಲ ನೀನೊಬ್ಬನೇ ರೊಕ್ಕ ಕೇಳುತ್ತಿ ಎಂದು ನನ್ನ ಮೇಲೆ ಸಿಟ್ಟಾಗಿದ್ದನು.

3. ದಿ: 23.06.2023 ರಂದು ರಾತ್ರಿ 8.30 ಗಂಟೆಗೆ ನಾನು ನಮ್ಮೂರಿನ ಲಕ್ಕಮ್ಮ ದೇವಿ ದೇವಸ್ಥಾನದಿಂದ ನಮ್ಮ ತೋಟಕ್ಕೆ ಮೋಟರ್ ಸೈಕಲನಲ್ಲಿ ಹೋಗುವಾಗ ದೇಸಪ್ಪ ಹಣಮಪ್ಪ ದಳವಾಯಿ ಇವರ ಜಮೀನಿನ ಹತ್ತಿರ 1 ನೇ ಆರೋಪಿ ಇತನು ಮುಳ್ಳು ಕಂಟಿ ಒಗೆದನು, ನಾನು ಮುಳ್ಳು ಕಂಟಿ ತೆಗೆಯಲು ಮೋಟರ್ ಸೈಕಲನ್ನು ನಿಲ್ಲಿಸಿ, ಮುಳ್ಳು ಕಂಟಿಯನ್ನು ತೆಗೆಯಲು ಹೋದಾಗ ನನ್ನ ಎರಡು ಭುಜಕ್ಕೆ ಮತ್ತು ತಲೆಯ ಬಲಭಾಗಕ್ಕೆ 1 ನೇ ಆರೋಪಿಯು ಕೊಡಲಿಯಿಂದ ಹೊಡೆದು ರಕ್ತ ಗಾಯಪಡಿಸಿದನು. ನಾನು ಮೇಲೆ ನೋಡಿದಾಗ 1 ನೇ ಆರೋಪಿ ಮತ್ತು ಸದಪ್ಪ ಮಾಯಪ್ಪ ಕಲಬುರ್ಗಿ, ಹಾಗೂ ಪರಸಪ್ಪ ಚೆಂದಪ್ಪ ಇಟಗಿ ಇದ್ದರು. 2 ನೇ ಆರೋಪಿಯು ಬಡಿಗೆಯಿಂದ ನನ್ನ ಬಲಗಣ್ಣಿನ ಬದಿಗೆ ಹೊಡೆದನು. ಪರಸಪ್ಪ ಚೆಂದಪ್ಪ ಇಟಗಿ ನನಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಾ ಬಿಡಬ್ಯಾಡ್ರಿ ಸಾಯಿಸಿರಿ ಎಂದು ಹೇಳುತ್ತಿದ್ದ. ನಾನು ನನ್ನ ಮೋಟರ್ ಸೈಕಲನ ಹೆಡ್ ಲೈಟನಿಂದ ಆರೋಪಿತರನ್ನು ನೋಡಿರುತ್ತೇನೆ. ಅದೇ ರಸ್ತೆಯಲ್ಲಿ ಚಾಸಾ-4 ರವರು ಬಂದರು. ಆತನ ಮೋಟರ್ ಸೈಕಲನಲ್ಲಿ ಬರುವುದನ್ನು ನೋಡಿ ಆರೋಪಿತರು ಸ್ಥಳದಿಂದ ಓಡಿ ಹೋದರು. ಚಾಸಾ-4 ರವರು ನನ್ನ ಜೊತೆ ಮಾತನಾಡಿ, ನಮ್ಮ ಮನೆಯವರಿಗೆ ಕರೆ ಮಾಡಿ ತಿಳಿಸಿರುತ್ತಾರೆ. ಚಾಸಾ-6 ರವರು ಸ್ಥಳಕ್ಕೆ ಬಂದು ನನ್ನನ್ನು ಮೋಟರ್ ಸೈಕಲನಲ್ಲಿ ಬಸವನ ಬಾಗೇವಾಡಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ಅಂಬುಲೆನ್ಸನಲ್ಲಿ ನನ್ನನ್ನು ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ನಾನು ಮೂರ್ಛೆ ಹೋಗಿರುತ್ತೇನೆ. 08 ದಿನಗಳ ನಂತರ ನನಗೆ ಪ್ರಜ್ಞೆ ಬಂದಿರುತ್ತದೆ. ಆ ಸಮಯದಲ್ಲಿ ನಾನು ಬಸವ ಬ್ರೇನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ. ಈ ಬಗ್ಗೆ ನಾನು

ಆಸ್ಪತ್ರೆಯಲ್ಲಿ ಪೋಲಿಸರಿಗೆ ದೂರು ನಿಡಿರುತ್ತೇನೆ. ದೂರನ್ನು ಚಾಸಾ-9 ರವರು ಬರದಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಕೊಡಲಿ ಮತ್ತು ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಕೊಡಲಿ ಮತ್ತು ಬಡಿಗೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ನನಗೆ ಹಲ್ಲೆ ಮಾಡಿದ್ದ ಸಿದ್ದಪ್ಪ ಮಲಕಪ್ಪ ಕಲ್ಬುರ್ಗಿ ಮತ್ತು ಸದಪ್ಪ ಮಾಯಪ್ಪ ಕಲಬುರ್ಗಿ ಈಗ ನ್ಯಾಯಾಲಯದ ಮುಂದೆ ಇರುತ್ತಾರೆ. ಪರಸಪ್ಪ ಚೆಂದಪ್ಪ ಇಟಗಿ ಇರುವುದಿಲ್ಲ. ಆತನಿಗೆ 60 ವರ್ಷದ ಮೇಲೆ ವಯಸ್ಸು ಆಗಿರುತ್ತದೆ. ನಾನು ಯಾವುದೇ ಮರುಹೇಳಿಕೆಯನ್ನು ತನಿಖಾಧಿಕಾರಿಯವರ ಮುಂದೆ ನೀಡಿರುವುದಿಲ್ಲ.

(ಮುಂದುವರೆದ ಮುಖ್ಯ ವಿಚಾರಣೆಯನ್ನು ಸರಕಾರಿ ಅಭಿಯೋಜಕರ ಕೋರಿಕೆಯಮ ಮೇರೆಗೆ ಮುಂದೂಡಲಾಯಿತು.)

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.